ತಿಳಿಸಿದ್ದೇನೆ. ಅದಕ್ಕೆ ಅನುಗುಣವಾಗಿ ಮಾಡುತ್ತೇವೆ. ಇಲ್ಲಿ ಕೆಲವು ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಅನ್ನು ಕೂಡ ರೆಡಿ ಮಾಡಿರತಕ್ಕ ವರದಿಯು ಸರ್ಕಾರದ ಮುಂದೆ ಇದೆ. ಇದು ಹೇಗೆ ಆಯಿತು. ನಷ್ಟ ಹೇಗಾಯಿತು ಎಂದು ವಿಚಾರಣೆ ಮಾಡಿದ ವರದಿಬೇರೆ ಇದೆ. ಅದನ್ನು ಬಹಳ ಅಮೂಲಾಗ್ರವಾಗಿ ವಿಚಾರ ಮಾಡತಕ್ಕದ್ದು ಇದೆ. ರಿಹ್ಯಾಬಿಲಿಟೇಷನ್ ಪ್ರೋಗ್ರಾಂ ಬಗ್ಗೆ ಕೂಡ ವಿಚಾರ ಮಾಡಿ ತಿಳಿಸಿದ್ದಾರೆ. ರಿಹ್ಯಾಬಿಲೆಚ್ ಮಾಡಬೇಕು. ಅಂದರೆ ವಿರೋಧ ಪಕ್ಷದವರು ಒಪ್ಪುತ್ತಾರೆಂದು ಭಾವಿಸಿದ್ದೇವೆ. Again Government will have to stand guarntee. ಅಥವಾ ಹಣ ತೆಗೆದುಕೊಂಡು ಹೋಗಿ ಅದಕ್ಕೆತುಂಬ ತಕ್ಕಂತಾದ್ದು.

ಇದು ನೆವರ್ ಎಂಡಿಂಗ್ ಬಿಜಿನೆಸ್ ಅಂತ ಒಂದು ಅಭಿಪ್ರಾಯ ಎಷ್ಟೇ ವಿಚಾರ ಮಾಡಿದ್ದೇವೆ. ಅದಕ್ಕಾಗಿ ಒಂದು ತಜ್ಞರ ಸಮೀತಿಯನ್ನು ನೇಮಕ ಮಾಡಿ ಯಾವ್ಯಾವ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಇದ್ದಾವೆ. ಅಂದರೆ ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಇಂತಹ ಕಂಪನಿಗಳು ಇದ್ದಾವೆ. ಅದರಿಂದ ನಾವು ಎಷ್ಟರಮಟ್ಟಿಗೆ ದೂರ ಸರಿಯಬಹುದು. ಅಂದರೆ ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಹಿತವನ್ನು ಕಡೆಗಣಿಸಲಿಲ್ಲ. ಅದನ್ನು ಸ್ಥಿರೀಕರಿಸಿ ಅದಕ್ಕೆ ಬೆಂಬಲ ಮತ್ತು ಒತ್ತುಕೊಟ್ಟು ಹೇಗೆ ಮಾಡಬೇಕು ಎನ್ನುವ ತೀರ್ಮಾನ ನಾವು ಮಾಡುತ್ತೇವೆ. ಆ ಪಟ್ಟಿಯಲ್ಲಿ ಇದೂ ಕೂಡ ಇದೆ. ನಾವು ಅಂತಿಮವಾಗಿ ತೀರ್ಮಾನ ಮಾಡುತ್ತೇವೆಂಬ ವಿಚಾರ ಮಾತ್ರ ಹೇಳುತ್ತೇನೆ. ರೀಹ್ಯಾಬಿಲೇಟೀಶನ್ ಪ್ರೋಗ್ರಾಂ ಮತ್ತೊಂದಕ್ಕೆ ಹೋಗಿ ಹೋಗಿ ನೂರಾರು ಕೋಟಿ ರೂಪಾಯಿಗಳನ್ನು ಅದಕ್ಕೆ ತುಂಬತಕ್ಕದ್ದು ಇಲ್ಲವೇ ಗ್ಯಾರಂಟಿ ನಿಲ್ಲತಕ್ಕದ್ದು ಅಷ್ಟು ಒಳ್ಳೆಯದಲ್ಲವೆಂಬ ಅಭಿಪ್ರಾಯವನ್ನು ಸರ್ಕಾರ ಹೊಂದಿದೆ.

**2. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಅಪ್ರೆಂಟೀಸ್ ಪಡೆದವರಿಗೆ ನೇಮಕ ಮಾಡಿಕೊಳ್ಳುವುದು.**

ಶ್ರೀ ಎಸ್. ಇಸಾಮಿಯ (ಭದ್ರಾವತಿ) : ಮಾನ್ಯ ಅಧ್ಯಕ್ಷರೇ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ 1979ರಿಂದ ಕೇಂದ್ರ ಸರ್ಕಾರದ ಅನ್ನೆಯ ನ್ಯಾಷನಲ್ ಅಪ್ರೆಂಟೀಸಿಷಿಪ್ ಟ್ರೈನಿಂಗ್ ಸ್ಕೀಂ (ಎನ್‌ಎಟಿಎಸ್)ನಲ್ಲಿ ತರಬೇತಿ ಪಡೆದು ವಿಐಎಸ್‌ಎಲ್ ಆಡಳಿತ ವರ್ಗವು ಖಾಲಿಯಿರುವ ಹುದ್ದೆಗಳನ್ನು ತರಬೇತಿ ಪಡೆದವರಿಗೆ ಕೊಡದೆ ಪ್ರತಿ ಕೆಲಸಕ್ಕೂ ಹೊರ ರಾಜ್ಯದವರಿಗೆ ಕಂಟ್ರಾಕ್ಟ್ ಕೊಡುತ್ತಿದ್ದು, ಹೊರ ರಾಜ್ಯದವರನ್ನು ನೇಮಕ ಮಾಡಿಕೊಳ್ಳುತ್ತಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮೇಲ್ಕಂಡ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೀರೋ ಅಥವಾ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಒತ್ತಡ ತರುತ್ತೀರೋ ಎಂಬುವುದರ ಬಗ್ಗೆ ದಯವಿಟ್ಟು ತಿಳಿಸಲು ಕೋರುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಾಕ್ಷಿಣೆಯವರೇ, ಯಾರಿಗಾದರೂ ಅರ್ಥವಾಯಿತೆ ಇದು? ಬೊಲೋಜಿ ಉರ್ದುಮೆ ಅಜೇಜ್ ಸೇಲ್‌ರವರು ಕನ್ನಡ ಮತ್ತು ಇದು ಬಹಳ ಇಂಪ್ರೂವ್ಡ್ ವೆರೈಟಿ. ಮಾನ್ಯ ಸಭಾಧ್ಯಕ್ಷಿಣೆಯವರೆ ಮಾನ್ಯ ಸದಸ್ಯರು ಕೇಳಿರುವಂಥ ವಿಚಾರಕ್ಕೆ ನನ್ನ ಹೇಳಿಕೆ ಈ ರೀತಿಯಾಗಿದೆ. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಸರ್ಕಾರಿ ಆದೇಶ ಕ್ರಮಾಂಕ ಸಿಐ46 ಸಿಐಎಸ್ 80ಪಿ ದಿನಾಂಕ 9-8-89ರ ಪ್ರಕಾರ ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಬರುವ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆಗೆ ವಹಿಸಲಾಗಿದೆ. ಅಂದಿನಿಂದ ಈ ಕಂಪನಿಯು ಈಗ ರಾಜ್ಯ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿಲ್ಲ. ಸದರಿ ಕಂಪನಿಯು ಖಾಲಿ ಹುದ್ದೆಗಳನ್ನು ತರಬೇತಿ ಪಡೆದವರಿಗೆ ಕೂಡದೆ ಹೊರ ರಾಜ್ಯಗಳವರಿಗೆ ಕಂಟ್ರಾಕ್ಟ್ ಕೊಡುತ್ತಿದ್ದು ಹಾಗೂ ಹೊರ ರಾಜ್ಯಗಳವರನ್ನು ನೇಮಕ ಮಾಡಿ ಕೊಳ್ಳುತ್ತಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಇದುವರೆಗೂ ಬಂದಿರುವುದಿಲ್ಲ. ಆದಕಾರಣ, ಸದರಿ ವಿಷಯದ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗಮನಕ್ಕೆ ತರುವ ವಿಷಯ

ಉದ್ಭವಿಸಿರಲಿಲ್ಲ. ಈ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕೇಂದ್ರ ಸರ್ಕಾರ ಉದ್ದಿಮೆಯಾಗಿರುವುದರಿಂದ, ಇನ್ನು ಮುಂದೆ ನೇಮಕಾತಿಗಳನ್ನು ಮಾಡುವಾಗ ಶ್ರೀಮತಿ ಸರೋಜಿನಿ ಮಹಿಷಿಯವರ ವರದಿಯ ಮೇಲೆ ಸರ್ಕಾರ ತೆಗೆದುಕೊಂಡಿರುವ ತೀರ್ಮಾನ ರೀತ್ಯಾ ಕ್ರಮ ತೆಗೆದುಕೊಳ್ಳುವಂತೆ ಸದರಿ ಕಂಪನಿಗೆ ತಿಳಿಸಲಾಗುವುದು.

ಉಪಾಧ್ಯಕ್ಷೀಣಿಯವರು : ಶ್ರೀಯುತ ಜಿ. ರಾಜುಗೌಡರವರು

### 3) ರೇಷ್ಮೆ ಬೆಲೆ ಸ್ಥಿರೀಕರಣ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸುವುದು

ಶ್ರೀ ಜಿ. ರಾಜುಗೌಡ ಹನೂರು : ಮಾನ್ಯ ಉಪಾಧ್ಯಕ್ಷೀಣಿಯವರೆ, ರೇಷ್ಮೆ ಇಲಾಖೆಯಲ್ಲಿ ಬೆಲೆ ಸ್ಥಿರೀಕರಣ ನಿಧಿ ಇದೆ. ಇದು ರೇಷ್ಮೆ ಗೂಡುದಾರರುಗಳಲ್ಲೂ ಮತ್ತು ರೇಷ್ಮೆ ಕೊಂಡು ಕೊಳ್ಳುವವರಲ್ಲೂ ವಸೂಲು ಮಾಡುವ ಹಣವಾಗಿದೆ. ಈ ಹಣ ಇದುವರೆಗೆ ಸುಮಾರು 70 ಕೋಟಿ ರೂ.ಗಳಷ್ಟು ಶೇಖರಿಸಲಾಗಿದೆ. ಈ ಹಣವನ್ನು ರೇಷ್ಮೆ ಕೈಷಿಕರ, ರೇಷ್ಮೆ ಉದ್ಯಮದವರ ಏಳಿಗೆಗೆ ವೆಚ್ಚ ಮಾಡಬೇಕೆಂದು ನಿಬಂಧನೆ ಇದೆ. ಈ ನಿಬಂಧನೆಯನ್ನು ಬದಿಗೊತ್ತಿ ಈ ಬೆಲೆ ಸ್ಥಿರೀಕರಣ ನಿಧಿಯನ್ನು ಸಿಕ್ಕಾಪಟ್ಟೆ ಮನೋ ಇಚ್ಛೆಯಂತೆ ಸರ್ಕಾರ ವೆಚ್ಚ ಮಾಡುತ್ತಿರುವುದು ಬಹಳ ದುಃಖಕರವಾಗಿದೆ ಈ ನಿಧಿಯನ್ನು ರಕ್ಷಣೆಮಾಡಿ ಯಾವ ಬಾಬುಗಳಿಗೆ ಈ ಹಣವನ್ನು ವೆಚ್ಚ ಮಾಡಬೇಕೋ ಅದಕ್ಕೆ ವೆಚ್ಚ ಮಾಡಿದರೆ, ನಿಮ್ಮ ಹೊಣೆಗಾರಿಕೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದಂತೆ ಆಗುತ್ತದೆ. ಇಲ್ಲದಿದ್ದರೆ, ನೀವು ಕರ್ತವ್ಯಲೋಪದ ದೋಶವನ್ನು ಹೊರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಈ ನಿಧಿಯಿಂದ 8 ಕೋಟಿ. ರೂ.ಗಳನ್ನು ಮುರಿದು ಕೊಳ್ಳುವುದಾಗಿ ಹೇಳಿದ್ದಾರೆ. ಈ ರೀತಿ ಮಾಡಬೇಕಾದರೆ, ಈಗಿರುವ ನಿಯಮವನ್ನು ತಿದ್ದುಪಡಿ ಮಾಡಬೇಕಾಗಿದೆ. ಈ ನಿಧಿಯ ಸಂಗ್ರಹಣೆಗೆ ಕಾರಣರಾಗಿರುವವರನ್ನು ಈಗಿರುವ ಬೆಲೆ ಸ್ಥಿರೀಕರಣ ಸಮಿತಿಯಿಂದ ಕೈಬಿಟ್ಟಿರುವುದು ಬಹಳ ಅನ್ಯಾಯವಾಗಿದೆ. ದಯವಿಟ್ಟು ರೇಷ್ಮೆಗೂಡು ಬೆಳೆಯುವವರೊಬ್ಬರನ್ನು ನೂಲು ಬಿಚ್ಚುವವರೊಬ್ಬರನ್ನು ರೇಷ್ಮೆ ವ್ಯಾಪಾರಿಯೊಬ್ಬರನ್ನು ಈ ಮೇಲ್ಕಂಡ ಸಂಸ್ಥೆಗೆ ಸದಸ್ಯರನ್ನಾಗಿ ಮಾಡಿ, ರೇಷ್ಮೆ ಬೆಳೆ ಪ್ರದೇಶದಿಂದ ಬಂದಿರುವ ಒಬ್ಬರನ್ನು ಈ ಸಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ನಿಧಿಯ ಹಣವನ್ನು ರೇಷ್ಮೆ ಕಡ್ಡಿ ಬೆಳೆಯುವ ರೈತರಿಗೆ ನೀರಾವರಿ ಬೆಳೆ ತೆಗೆಯಲಿಕ್ಕೆ, ರೇಷ್ಮೆ ದಾರವನ್ನು ಬಿಚ್ಚುವವರಿಗೆ ಉಪಕರಣ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ ಹಾಗೂ ರೇಷ್ಮೆ ದಾರ ಬಿಚ್ಚುವ ಸಹಕಾರ ಸಂಘಗಳಿಗೆ ಕೊಡಬೇಕಾದ ಸುಸ್ತಿ ಬಡ್ಡಿ ಹಾಗೂ ಸರಳ ಬಡ್ಡಿಗೆ ಸರಿಪಡಿಸಲಿಕ್ಕೆ ಕೊಡಬೇಕೆಂದು ಈ ಮೂಲಕ ಮಾನ್ಯ ರೇಷ್ಮೆ ರಾಜ್ಯ ಸಚಿವರನ್ನು ಒತ್ತಾಯಸುತ್ತೇನೆ. ಈ ನಿಧಿಯನ್ನು ತಮ್ಮದೇ ಆದ ಶೀರ್ಷಿಕೆಯಲ್ಲಿ ಈ ಹೆಡ್ಡಿಗೆ ವರ್ಗಾಯಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) : ಮಾನ್ಯ ಸಭಾಧ್ಯಕ್ಷೀಣಿಯವರೆ,

ಕರ್ನಾಟಕ ರೇಷ್ಮೆ ಹುಳು, ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನಾ, ಸರಬರಾಜು, ವಿತರಣೆ, ಮತ್ತು ಮಾರಾಟ ನಿಯಂತ್ರಣ) ಕಾಯ್ದೆ 1959, ಸೆಕ್ಷನ್ 17 'ಎ' ನಲ್ಲಿ ಕರ್ನಾಟಕ ರೇಷ್ಮೆ ಹುಳು, ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು ಅಭಿವೃದ್ಧಿ ಮತ್ತು ಬೆಲೆ ಸ್ಥಿರೀಕರಣ ನಿಧಿಯನ್ನು ರಚಿಸಲು ಅವಕಾಶವಿದೆ.

ಇದೇ ಕಾಯ್ದೆಯ ನಿಯಮ 17 (ಜೆ)ಯ ಪ್ರಕಾರ ಕಾಯ್ದೆ 17ಎನಲ್ಲಿ ರಚಿತವಾದ ನಿಧಿಯ ಆಡಳಿತಕ್ಕಾಗಿ, ಕರ್ನಾಟಕ ರೇಷ್ಮೆಹುಳು ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು, ಬೆಲೆ, ಸ್ಥಿರೀಕರಣ ನಿಧಿಯ ಪ್ರಾಧಿಕಾರವನ್ನು ರಚಿಸಲಾಗಿದೆ. ಇದರ ಸದಸ್ಯರು ಕೆಳಕಂಡಂತಿದೆ.